# ಕಬ್ಬು ಕಟಾವು ಮತ್ತು ಜೀತ ಪದ್ಧತಿ

## ಬೆಳಗಾವಿಯಿಂದ ಒಂದು ವರದಿ

ಜನವರಿ- ಫೆಬ್ರುವರಿ 2022

**<u>ವರದಿ ಪ್ರಕಟಕರು:</u>**

**ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ - ಕರ್ನಾಟಕ (ಪಿಯುಸಿಎಲ್ - ಕೆ),**

**ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ (ಎಐಎಲ್ಎಜೆ) ಮತ್ತು**

**ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (ಎಐಎಸ್ಎ)**



ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮತ್ತು ರಾಮದುರ್ಗ ತಾಲೂಕುಗಳಲ್ಲಿ ಮಧ್ಯಪ್ರದೇಶ ಮೂಲದ ಆದಿವಾಸಿಗಳನ್ನು ಜೀತ ಕಾರ್ಮಿಕರಾಗಿ ದುಡಿಸಿಕೊಳ್ಳುತ್ತಿದ್ದ ಎರಡು ಗಂಭೀರ ಪ್ರಕರಣಗಳನ್ನು ಗಮನದಲ್ಲಿರಿಸಿಕೊಂಡು, ಈ ಸಮಸ್ಯೆಯ ಸತ್ಯಾಸತ್ಯತೆಯನ್ನು ಅರಿಯಲಿಕ್ಕೆ ವಿವಿಧ ಮಾನವ ಹಕ್ಕು ಮತ್ತು ಪ್ರಗತಿಪರ ಸಂಘಟನೆಗಳನ್ನು ಪ್ರತಿನಿಧಿಸುವ ಶಶಾಂಕ್ ಎಸ್ ಆರ್ ( *ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ - ಕರ್ನಾಟಕ* ), ಅವನಿ ಚೋಕ್ಷಿ (*ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್*), ಸೈಯದ್ ಜುನೇದ್ (*ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್*) ಮತ್ತು ಸಾಚಿ (*ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್*) ಅವರನ್ನು ಒಳಗೊಂಡ ಸತ್ಯಶೋಧನಾ ಸಮಿತಿಯೊಂದನ್ನು ರಚಿಸಲಾಯಿತು. ಸತ್ಯಶೋಧನಾ ಸಮಿತಿಯು ಕಾರ್ಮಿಕರನ್ನು ಭೇಟಿ ಮಾಡಲು 2022 ರ ಜನವರಿ 28 ಮತ್ತು 29 ರಂದು ಬೆಳಗಾವಿಗೆ ಭೇಟಿ ನೀಡಿತು. ಅಲ್ಲದೇ, ಈ ವಿಚಾರವಾಗಿ ಸಮಿತಿಯು ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆಯ ಉಪ ಕಾರ್ಮಿಕ ಆಯುಕ್ತರು, ಮಕ್ಕಳ ಕಲ್ಯಾಣ ಸಮಿತಿ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಟ್ಟಿಗೆಯೂ ಸಂವಹಿಸಿತು.




ಕಾರ್ಮಿಕರೊಂದಿಗೆ ಮಾತನಾಡಿದಾಗ, ಕಾರ್ಮಿಕರು ಮಧ್ಯಪ್ರದೇಶದ ಆದಿವಾಸಿ ಸಮುದಾಯಕ್ಕೆ ಸೇರಿದವರು ಎಂದು ಕಂಡುಬಂದಿದೆ. ಪ್ರತಿ ಕಾರ್ಮಿಕರಿಗೆ ರೂ. 20,000/- ಮುಂಗಡ ಹಣ (advance) ಪಾವತಿಸಿ ಗುತ್ತಿಗೆದಾರರು ಇವರೆಲ್ಲರನ್ನು ಬೆಳಗಾವಿಗೆ ಕರೆತಂದಿದ್ದರು. ಸತ್ಯಶೋಧನಾ ತಂಡವು ಮಾತನಾಡಿದ ಕಾರ್ಮಿಕರ ಗುಂಪಿಗೆ ಸಂಬಂಧಿಸಿದಂತೆ, ಈ ಮುಂಗಡ ಹಣವನ್ನು 20 ಕಾರ್ಮಿಕರಿಗೆ ಪಾವತಿಸಲಾಗಿದ್ದು, ಅವರಲ್ಲಿ ಒಂಬತ್ತು ಜನ ಅಪ್ರಾಪ್ತ ವಯಸ್ಕರಾಗಿದ್ದರೆ. ಕಾರ್ಮಿಕರನ್ನು ಬೆಳಗಾವಿಗೆ

ಕರೆತರುವ ಮುನ್ನ, ಅವರಿಗೆ ಪಾವತಿಸಬೇಕಾದ ವೇತನ ದರದ ಬಗ್ಗೆಯಾಗಲಿ, ಅವರಿಗೆ ನೀಡಲಾಗಿದ್ದ ಮುಂಗಡದ ಮರುಪಾವತಿಯ ವಿವರಗಳನ್ನಾಗಲಿ, ಅವರಿಗೆ ನೀಡಿದ ಮುಂಗಡಕ್ಕೆ ಸೇರುವ ಬಡ್ಡಿದರ ಎಷ್ಟು ಎಂಬ ಬಗೆಗಿನ ಯಾವ ಮಾಹಿತಿಯನ್ನೂ ನೀಡಲಾಗಿರಲಿಲ್ಲ ಎಂದು ಕಾರ್ಮಿಕರು ತಿಳಿಸಿರುತ್ತಾರೆ. ಬೆಳಗಾವಿಗೆ ಆಗಮಿಸಿದ ನಂತರ, ಕಾರ್ಮಿಕರು ತಾವು ಕೊಯ್ಲು ಮಾಡಿದ ಹೊಲಗಳ ಸುತ್ತಲೇ ಟಾರ್ಪಾಲಿನ್ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುವಂತೆ ಮಾಡಲಾಯಿತು. ದಿನವೂ ಕಬ್ಬು ಕಟಾವು ಮಾಡಲು ಮತ್ತು ದಿನನಿತ್ಯದ ಕಟಾವನ್ನು ಟ್ರಾಕ್ಟರುಗಳಿಗೆ ಲೋಡ್ ಮಾಡಲು ದಿನವೊಂದಕ್ಕೆ ಈ ಕಾರ್ಮಿಕರು ಸುಮಾರು 15 ಗಂಟೆ ದುಡಿದರೂ, ಗುತ್ತಿಗೆದಾರರು ವೇತನ ನೀಡಲಿಲ್ಲ. ಆದರೆ ಅವರು ಕೆಲಸ ಮಾಡಿದ ಜಮೀನಿನ ರೈತರಿಂದ ಪ್ರತಿ ಪ್ರತಿ ಕಾರ್ಮಿಕ ಸುಮಾರು ರೂ. 25-30 ನ್ನು ಭಕ್ಷೀಸಾಗಿ ಪಡೆದಿರುತ್ತಾರೆ. ವೇತನವಿಲ್ಲದೆ 2 ½ ತಿಂಗಳು ಕೆಲಸ ಮಾಡಿದ ನಂತರ, ಕಾರ್ಮಿಕರು ತಮ್ಮ ವೇತನದ ಬಗ್ಗೆ ಗುತ್ತಿಗೆದಾರರನ್ನು ವಿಚಾರಿಸಿದಾಗ, ಅವರು ಇನ್ನೂ ರೂ. 2 ಲಕ್ಷ ಸಾಲದಲ್ಲಿದ್ದು, ಈ ಸಾಲವನ್ನು



ತೀರಿಸಿದ ನಂತರವೇ ಅವರು ವಾಪಸ್ಸಾಗಬಹುದು ಎಂದು ತಿಳಿಸಲಾಗಿದೆ. 1976ರ ಜೀತ ಪದ್ಧತಿ (ರದ್ದತಿ) ಕಾಯ್ದೆಯಡಿಯಲ್ಲಿ ವ್ಯಾಖ್ಯಾನಿಸಲಾಗಿರುವಂತೆ ಇದು ಸ್ಪಷ್ಟವಾಗಿ 'ಬಾಂಡೆಡ್ ಡೆಬ್ಟ್' (bonded debt) ಆಗಿದೆ.

ಆಘಾತಕಾರಿ ಸಂಗತಿಯೆಂದರೆ, ಎರಡೂ ತಾಲೂಕಿನ ತಹಶೀಲ್ದಾರರು ಕಾರ್ಮಿಕ ಮತ್ತು ಪೊಲೀಸ್ ಇಲಾಖೆಗಳ ಅಧಿಕಾರಿಗಳು ಮತ್ತು ಪಂಚಾಯತ್ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಕಾರ್ಮಿಕರನ್ನು ಯಾರೂ ದೈಹಿಕವಾಗಿ ನಿರ್ಬಂಧಿಸಿಲ್ಲ ಎಂಬ ಆಧಾರದ ಮೇಲೆ ಯಾವುದೇ ಜೀತ ಕಾರ್ಮಿಕರು ಅಥವಾ ಬಾಲ ಕಾರ್ಮಿಕರು ಇಲ್ಲ ಎಂದು ವರದಿ ನೀಡಿದ್ದಾರೆ. ಇದರ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ತಂಡಕ್ಕೆ ಪತ್ರ ಬರೆದು ಯಾವುದೇ ಕಾರ್ಮಿಕರನ್ನು ಜೀತ ಕಾರ್ಮಿಕರಂತೆಯಾಗಲೀ ಅಥವಾ ಬಾಲಕಾರ್ಮಿಕರಂತೆಯಾಗಲೀ ದುಡಿಸಿಕೊಳ್ಳಲಾಗಿಲ್ಲ ಎಂದು ತಿಳಿಸಿದ್ದಾರೆ. ಆದಿವಾಸಿ ವಲಸೆ ಕಾರ್ಮಿಕರು ಮತ್ತು ಮಕ್ಕಳ ಹಕ್ಕುಗಳ ಘೋರ ಉಲ್ಲಂಘನೆಗಳು ನಡೆದಿದ್ದರೂ, ಡಿಸಿ ಮತ್ತು ಮ್ಯಾಜಿಸ್ಟ್ರೇಟ್‌ಗಳೂ ಸೇರಿದಂತೆ ಜಿಲ್ಲಾಡಳಿತ ಮತ್ತು ಅಧಿಕಾರಿಗಳು ಪದೇ ಪದೇ ಅದನ್ನು ನಿರಾಕರಿಸುತ್ತಿರುವುದು ಮತ್ತು ಆರೋಪಿಗಳ ವಿರುದ್ಧ ಸೂಕ್ತ ಕಾನೂನುಗಳ ಅಡಿಯಲ್ಲಿ ಕ್ರಮಕೈಗೊಳ್ಳಲು

ನಿರಾಕರಿಸುತ್ತಿರುವುದರ ಜೊತೆಯಲ್ಲೇ ಸಮಾಜದಲ್ಲಿ ಅತ್ಯಂತ ಅಂಚಿನಲ್ಲಿರುವ ಸಮುದಾಯ ಒಂದರ ಹಿನ್ನಲೆಯಿಂದ ಬರುವ ಜನರ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಅಧಿಕಾರಿಗಳು ಪ್ರದರ್ಶಿಸಿದ ಉದಾಸೀನತೆ ಮತ್ತು ಅಸೂಕ್ಷ್ಮತೆಯು, ಜಿಲ್ಲಾಡಳಿತವು ಈ ಪ್ರಕರಣಗಳನ್ನು ಮುಚ್ಚಿ ಹಾಕಲಿಕ್ಕೆ ಪ್ರಯತ್ನಿಸಿರುವುದನ್ನು ಸ್ಪಷ್ಟಪಡಿಸುತ್ತದೆ. ಕೊನೆಗೂ, 05.02.2022 ರಂದು ಸದಲಗಾ ಪೊಲೀಸ್ ಠಾಣೆಯಿಂದ 1976 ರ ಜೀತ ಪದ್ಧತಿ (ರದ್ದತಿ) ಕಾಯ್ದೆಯ ಪರಿಚ್ಛೇದ 16 ಮತ್ತು 17 ರ ಅಡಿಯಲ್ಲಿ ಎಫ್ಐಆರ್ (ಎಫ್ಐಆರ್ ಸಂಖ್ಯೆ 18/2022) ಅನ್ನು ದಾಖಲಿಸಲಾಗಿದೆ. ಅಲ್ಲದೇ, ಕಾರ್ಮಿಕರು ತಮಗೆ ಬಾಕಿ ಇರುವ ಮೊತ್ತವನ್ನು ಗುತ್ತಿಗೆದಾರರು ಪಾವತಿಸದಿರುವ ಬಗ್ಗೆ ಸಲ್ಲಿಸಿರುವ ದೂರನ್ನೂ ಉಪ ಕಾರ್ಮಿಕ ಆಯುಕ್ತರು (ಬೆಳಗಾವಿ) 1948 ರ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ದೂರಿನಂತೆ ಪರಿಗಣಿಸಿದ್ದು, ಪ್ರಕರಣದ ವಿಚಾರಣೆಯು ಚಾಲ್ತಿಯಲ್ಲಿದೆ.



**ವರದಿಯ ಸಾರಾಂಶ**

- ಆಡಳಿತವು, ಬೇಗಾರ ಮತ್ತು ಇತರೆ ಬಲಾತ್ಕಾರದ ದುಡಿಮೆಯನ್ನು ನಿಷೇಧಿಸುವ ಭಾರತದ ಸಂವಿಧಾನದ ಅನುಚ್ಛೇದ 23 ನ್ನೂ ಒಳಗೊಂಡಂತೆ, ಸಂವಿಧಾನವನ್ನು ಮತ್ತು ಹಲವು ಶಾಸನಗಳನ್ನು ಉಲ್ಲಂಘಿಸಿದೆ ಮತ್ತು ಇವನ್ನು ಸತ್ಯಶೋಧನಾ ಸಮಿತಿಯು ವರದಿಯು ದೃಢೀಕರಿಸುತ್ತಿದೆ.
- ಸದರಿ ಕಾರ್ಮಿಕರು ಜೀತ ಪದ್ಧತಿ (ರದ್ದತಿ) ಕಾಯ್ದೆಯು ವ್ಯಾಖ್ಯಾನಿಸುವಂತೆ ಜೀತದಾಳುಗಳಾಗಿದ್ದು,ಜೀತ ಪದ್ಧತಿ (ರದ್ದತಿ) ಕಾಯ್ದೆಯಡಿಯಲ್ಲಿ ಅವರಿಗೆ ಪರಿಹಾರವನ್ನು ಮತ್ತು ಪುನರ್ವಸತಿ ಒದಗಿಸಬೇಕು. ಅಲ್ಲದೇ, ಸದರಿ ಕಾರ್ಮಿಕರು 2016 ರ ಸೆಂಟ್ರಲ್ ಸೆಕ್ಟರ್ ಸ್ಕೀಮ್ ಫಾರ್ ರಿಹ್ಯಾಬಿಲಿಟೇಷನ್ ಆಫ್ ಬಾಂಡೆಡ್ ಲೇಬರ್ ಅಡಿಯಲ್ಲಿ ಪುನರ್ವಸತಿ ಪ್ಯಾಕೇಜ್

ಪಡೆಯಲು ಅರ್ಹರಾಗಿದ್ದು, ವಯಸ್ಕ ಪುರುಷ  ಕಾರ್ಮಿಕರಿಗೆ ತಲಾ ರೂ. 1,00,000 ಹಾಗು ಪ್ರತಿ ಮಹಿಳೆ ಮತ್ತು ಬಾಲ ಕಾರ್ಮಿಕರಿಗೆ ತಲಾ ರೂ. 2,00,000 ನೀಡತಕ್ಕದ್ದು.

- ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಜೀತ ಪದ್ಧತಿಯ ಆಚರಣೆಯು ನಡೆಯುತ್ತಿದೆಯೇ ಎಂಬುದನ್ನು ಶೋಧಿಸಿ, ಅದನ್ನು ನಿರ್ಮೂಲನೆ ಮಾಡಲು ಅಗತ್ಯ ಕ್ರಮಗಳನ್ನು ಜರುಗಿಸಬೇಕಾದದ್ದು ಜಿಲ್ಲಾಧಿಕಾರಿಯ ಕರ್ತವ್ಯವಾಗಿದ್ದು, ಅದನ್ನು ನಿರ್ವಹಿಸುವುದರಲ್ಲಿ ಅವರು ಸಂಪೂರ್ಣ ವಿಫಲರಾಗಿದ್ದಾರೆ. ಅಲ್ಲದೇ, ಕಾರ್ಮಿಕರೊಂದಿಗೆ ಮಾತನಾಡದೆಯೇ ಪ್ರಕರಣದಲ್ಲಿ ಬಲಾತ್ಕಾರದ ದುಡಿತವು ಕಂಡುಬಂದಿರುವುದಿಲ್ಲ ಎಂದು ವರದಿ ನೀಡಿರುವುದು Standard Operating Procedure for the Identification and Rescue of Bonded Labourers and Prosecution of Offender, 2017 ನ ಉಲ್ಲಂಘನೆಯಾಗಿದೆ. ಅಲ್ಲದೇ ಜಿಲ್ಲಾಧಿಕಾರಿಯ ಕಾರ್ಯ ನಿರ್ವಹಿಸಿರುವ ರೀತಿಯು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಜೀತದಾಳುಗಳನ್ನು ಗುರುತಿಸಿ,ಬಿಡುಗಡೆಗಳಿಸಿ ಮತ್ತು ಅವರಿಗೆ ಪುನರ್ವಸತಿ ಒದಗಿಸುವ ನಿಟ್ಟಿನಲ್ಲಿ, ದಿನಾಂಕ 1/05/2021 ಮತ್ತು 08/12/2021 ನೀಡಿರುವ ಸಲಹಾತ್ಮಕ ಸೂಚನೆಗಳನ್ನೂ ಉಲ್ಲಂಘಿಸುತ್ತದೆ.
- 1986 ರ ಬಾಲಕಾರ್ಮಿಕ ಮತ್ತು ಕಿಶೋರಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆಯಡಿಯಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ನಿಷೇಧಿಸಲಾಗಿದ್ದರೂ ಸದರಿ ಪ್ರಕರಣದಲ್ಲಿ ಅದು ನಡೆದಿರುವುದು ಕಾರ್ಮಿಕರು ನೀಡಿರುವ ಹೇಳಿಕೆಗಳಿಂದ ರುಜುವಾತಾಗುತ್ತದೆ.  ವಾಸ್ತವವಾಗಿ, 20 ಜನರಿಗೆ ಮುಂಗಡಗಳನ್ನು ಪಾವತಿಸಲಾಗಿದೆ ಎಂದು ಗುತ್ತಿಗೆದಾರರ ಒಪ್ಪಿಕೊಂಡಿರುವುದು, 11 ವಯಸ್ಕರನ್ನು ಹೊರತುಪಡಿಸಿ, ಎಲ್ಲಾ 9 ಮಕ್ಕಳನ್ನು ಸಹ 1986 ರ ಕಾಯಿದೆಯನ್ನು ಉಲ್ಲಂಘಿಸಿ ಕೆಲಸಕ್ಕೆ ದೂಡಲಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೇ, ಮಕ್ಕಳ ಹೇಳಿಕೆಗಳಿಂದಲೂ ಕೂಡ ಕಾಯಿದೆಯ ಉಲ್ಲಂಘನೆಯಾಗಿದೆ ಎಂಬುದು ಕಂಡುಬರುತ್ತದೆ ಎಂದು ಮಕ್ಕಳ ಕಲ್ಯಾಣ ಸಮಿತಿಯು ಸಹ ದೃಢಪಡಿಸಿದೆ.
- **ಕನಿಷ್ಠ ವೇತನ ಕಾಯಿದೆ, 1948 ಮತ್ತು ಅಂತರ-ರಾಜ್ಯ ವಲಸೆ ಕಾರ್ಮಿಕರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕಾಯಿದೆ, 1979 ರ ನಿಬಂಧನೆಗಳನ್ನು ಉಲ್ಲಂಘಿಸಲಾಗಿದೆ ಎಂದು ಸತ್ಯಶೋಧನಾ ಸಮಿತಿಯು ಕಂಡುಹಿಡಿದಿದೆ ಮತ್ತು ಈ ಕಾಯ್ದೆಗಳ ಅನ್ವಯ ಕಾರ್ಮಿಕರಿಗೆ ಗುತ್ತಿಗೆದಾರರ ಕಡೆಯಿಂದ ಬಾಕಿಯಿರುವ ಮೊತ್ತ ತಲಾ ರೂ. 1,18,878.8/- .**
- ಸದರಿ ಪ್ರಕರಣದಲ್ಲಿ 1989 ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯನ್ನೂ ಸಹ ಉಲ್ಲಂಘಿಸಲಾಗಿದೆ. ಸದರಿ ಪ್ರಕರಣದಲ್ಲಿ ಕಾರ್ಮಿಕರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಅವರನ್ನು ಬಲಾತ್ಕಾರವಾಗಿ ದುಡಿಸಿಕೊಳ್ಳುವುದು ಐದು ವರ್ಷಗಳವರೆಗೆ ವಿಸ್ತರಿಸುವ ಜೈಲು ಶಿಕ್ಷೆಗೆ ಗುರಿಪಡಿಸಬಹುದಾದ ಅಪರಾಧವಾಗಿದೆ.
- ಜೀತ ಕಾರ್ಮಿಕ ಪದ್ದತಿಯು ಕಂಡುಬಂದಲ್ಲಿ ಅದನ್ನು ಕಡ್ಡಾಯವಾಗಿ ಗ್ರಾಮ ಪಂಚಾಯಿತಿಯು ವರದಿ ಮಾಡಬೇಕಿದ್ದು, ಸದರಿ ಪ್ರಕರಣದಲ್ಲಿ 1993 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯ ಉಲ್ಲಂಘನೆಯಾಗಿದೆ.
- ಸಮಾಜದ ಅತ್ಯಂತ ದುರ್ಬಲ ಮತ್ತು ಅಂಚಿನಲ್ಲಿರುವ ವರ್ಗಗಳಿಂದ ಬಂದ ಕಾರ್ಮಿಕರಿಗೆ ಸಂಬಂಧಿಸಿದಂತೆ ಸಾಂಸ್ಥಿಕ ಅಸಡ್ಡೆ (Instituional Apathy) ಮತ್ತು ಅರಿವಿನ ಕೊರತೆಯು ಆಘಾತಕಾರಿಯಾಗಿದೆ ಮತ್ತು ಇದು ಭಾರತದ ಸಂವಿಧಾನದ 21 ನೇ ವಿಧಿಯ ಅಡಿಯಲ್ಲಿ ಘನತೆವೆತ್ತ ಜೀವನ ನಡೆಸುವ ಮೂಲಭೂತ ಹಕ್ಕಿನ ಉಲ್ಲಂಘನೆಗೆ ಕಾರಣವಾಗಿದೆ.

- ಘಟನೆಯನ್ನು ಪ್ರತ್ಯೇಕವಾಗಿ ನೋಡಲಾಗುವುದಿಲ್ಲ. ಸತ್ಯಶೋಧನಾ ತಂಡದೊಂದಿಗೆ ನಡೆಸಿದ ಸಂವಾದದಲ್ಲಿ ಕಾರ್ಮಿಕರು ತಮ್ಮ ಮನೆಗಳಿಂದ ಬೆಳಗಾವಿ ಮತ್ತು ಬಾಗಲಕೋಟೆ ಸೇರಿದಂತೆ ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ವಲಸೆ ಬಂದ ಇಂತಹ ಹಲವು ಗುಂಪುಗಳ ಬಗ್ಗೆ ತಮಗೆ ತಿಳಿದಿದೆ ಎಂದು ಬಹಿರಂಗಪಡಿಸಿದರು. ಕರ್ನಾಟಕದ ವಿವಿಧ ಜಿಲ್ಲೆಗಳಿಗೆ ಕಾರ್ಮಿಕರ ವಲಸೆಯು ವಾರ್ಷಿಕ ವಿದ್ಯಮಾನವಾಗಿದೆ. ಈ ರೀತ್ಯ ವಲಸೆ ಚಕ್ರದಲ್ಲಿ ತೊಡಗಿರುವ ವಿವಿಧ ಜನರ ನಡುವಿನ ಸಂಬಂಧದಲ್ಲಿನ ಶ್ರೇಣೀಕೃತ ಶಕ್ತಿ ಸಂರಚನೆಗಳು, ದುರ್ಬಲ ಸಮುದಾಯಗಳಿಂದ ಬಂದ ಕಾರ್ಮಿಕರ ಹಕ್ಕುಗಳನ್ನು ನಿರಾಕರಿಸುವ ಶೋಷಣೆ ಮತ್ತು ದಬ್ಬಾಳಿಕೆಯ ವ್ಯವಸ್ಥಿತ ಮಾದರಿಗಳನ್ನು ಸಕ್ರಿಯಗೊಳಿಸುತ್ತದೆ.

**ಬೇಡಿಕೆಗಳ ಸಾರಾಂಶ**

1. 1976ರ ಜೀತ ಪದ್ಧತಿ (ರದ್ದತಿ) ಕಾಯ್ದೆಯನ್ನು ಎಲ್ಲಾ ಜಿಲ್ಲಾ ಅಧಿಕಾರಿಗಳು ಅದರ ಆಶಯಗಳಿಗೆ ಅನುಗುಣವಾಗಿ ಅರ್ಥೈಸಿಕೊಳ್ಳಬೇಕು ಮತ್ತು ವಿಜಿಲೆನ್ಸ್ ಸಮಿತಿಗಳನ್ನು (vigilance committees) ಸಕ್ರಿಯಗೊಳಿಸುವುದು, ನಿಯತವಾಗಿ ಸಮೀಕ್ಷೆಗಳನ್ನು ಕೈಗೊಳ್ಳುವುದು, ಮತ್ತು ಪುನರ್ವಸತಿ ಆದೇಶಗಳನ್ನು (rehabilitation mandate) ಜಾರಿಗೊಳಿಸುವುದರೊಂದಿಗೆ ಕಾಯ್ದೆಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸಬೇಕು.
2. ಅದೇ ರೀತಿ, ನಿಯತ ಸಮೀಕ್ಷೆ ಮತ್ತು ಪರಿವೀಕ್ಷಣೆ (monitoring) ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಕಿಶೋರಕಾರ್ಮಿಕ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಮತ್ತು ಕಾರ್ಮಿಕ ಇಲಾಖೆ ಕೈಜೋಡಿಸಿ ಕೆಲಸ ಮಾಡಬೇಕು ಮತ್ತು District Task Force Against Child and Adolescent Labour ಅನ್ನು ರಚಿಸಿ, ಸಕ್ರಿಯಗೊಳಿಸಬೇಕು. ಇದಲ್ಲದೆ, ನಿಯಮ 4E ಪ್ರಕಾರ ನಿಯತಕಾಲಿಕವಾಗಿ ಪರಿವೀಕ್ಷಣೆ (monitoring) ಮತ್ತು ತಪಾಸಣೆಯ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ.
3. ಕಾರ್ಮಿಕ ಇಲಾಖೆಯು ಅಂತರ-ರಾಜ್ಯ ವಲಸೆ ಕಾರ್ಮಿಕರ (ಉದ್ಯೋಗದ ನಿಯಂತ್ರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1979 ಮತ್ತು ಕನಿಷ್ಠ ವೇತನ ಕಾಯಿದೆ, 1948 ರ ಅನುಸರಣೆಗೆ ಸಂಬಂಧಿಸಿದಂತೆ ನಿಯತ ತಪಾಸಣೆಗಳನ್ನು ನಡೆಸಬೇಕು ಮತ್ತು ಸದರಿ ಕಾಯ್ದೆಯನ್ನು ಉಲ್ಲಂಘಿಸುವವರ ವಿರುದ್ಧ ತಕ್ಷಣವೇ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.
4. ದಬ್ಬಾಳಿಕೆಯ, ಶೋಷಣೆಯ ಮತ್ತು ಜೀತ ಕಾರ್ಮಿಕ ಪರಿಸ್ಥಿತಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಮಾನವೀಯವಾಗಿ ಮತ್ತು ಘನತೆವೆತ್ತ ವ್ಯಕ್ತಿಗಳನ್ನಾಗಿ ಕಾಣಲು ಕರ್ನಾಟಕ ರಾಜ್ಯವು ಎಲ್ಲರಿಗೂ ಸುತ್ತೋಲೆ ಹೊರಡಿಸಬೇಕು ಮತ್ತು ಕಾನೂನು ಉಲ್ಲಂಘನೆಯ ಆರೋಪಗಳನ್ನು ನಿರಂಕುಶವಾಗಿ ವಜಾ ಮಾಡುವ ಅಧಿಕಾರಿಗಳ ವಿರುದ್ಧ ತಕ್ಷಣವೇ ಶಿಸ್ತು ಕ್ರಮಗಳನ್ನು ಕೈಗೊಳ್ಳಬೇಕು.

5. ಕಬ್ಬು ಕಟಾವು ಮತ್ತು ಸಾಗಣೆಯಲ್ಲಿ ತೊಡಗಿರುವ ಕಬ್ಬು ಕಾರ್ಮಿಕರ ಆರ್ಥಿಕ ಭದ್ರತೆ ಮತ್ತು ಜೀವನಮಟ್ಟವನ್ನು ಸುಧಾರಿಸಲು ಕರ್ನಾಟಕ ರಾಜ್ಯವು ಕಬ್ಬು ಕಟಾವು ಕಾರ್ಮಿಕರ ಕಲ್ಯಾಣ ಮಂಡಳಿಯ ರಚನೆಯ ಬಗ್ಗೆ ಆಲೋಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.
6. ಜೀತ ಪದ್ಧತಿಯ ನಿರ್ಮೂಲನೆ ಮತ್ತು ಕಾರ್ಮಿಕರ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಎಲ್ಲಾ ಅಧಿಕಾರಿಗಳಿಗೆ ಜೀತ ಪದ್ಧತಿಯ ಕುರಿತು ಜಾಗೃತಿ ಅಭಿಯಾನವನ್ನು ನಡೆಸಬೇಕು.
7. 1993 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, ಪರಿಚ್ಛೇದ 58A ಅಡಿಯಲ್ಲಿ ಜೀತ ಪದ್ಧತಿ ಪ್ರಕರಣಗಳನ್ನು ವರದಿ ಮಾಡುವ ಬಾಧ್ಯತೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಸುತ್ತೋಲೆಯನ್ನು ಹೊರಡಿಸಬೇಕು.
8. ಬೆಳಗಾವಿ ಜಿಲ್ಲೆಯ ಆಡಳಿತವು ಪ್ರತಿ ಋತುವಿನಲ್ಲಿ ಕಬ್ಬು ಕಟಾವು ಮತ್ತು ಲೋಡಿಂಗ್‌ನಲ್ಲಿ ತೊಡಗಿರುವ ಅಂತರ್ ರಾಜ್ಯ ಮತ್ತು ರಾಜ್ಯದೊಳಗಿನ ವಲಸೆ ಕಾರ್ಮಿಕರನ್ನು ಸಮೀಕ್ಷೆ ಮಾಡಬೇಕು ಮತ್ತು ಮೇಲೆ ವಿವರಿಸಿದ ವಿವಿಧ ಕಾನೂನುಗಳ ಅನುಷ್ಠಾನವನ್ನು ಖಾತ್ರಿಪಡಿಸಿಕೊಳ್ಳಬೇಕು.

9. ಯಾವುದಾದರೂ ಗುರುತಿಸಬಹುದಾದ ಅಪರಾಧ ನಡೆದಿರುವುದು ಕಂಡುಬಂದಲ್ಲಿ ಕಡ್ಡಾಯವಾಗಿ ಎಫ್‌ಐಆರ್ ಅನ್ನು ನೊಂದಾಯಿಸಬೇಕು ಮತ್ತು ಅಂತಹ ಪರಿಸ್ಥಿತಿಯಲ್ಲಿ ಯಾವುದೇ ಪ್ರಾಥಮಿಕ ವಿಚಾರಣೆಯನ್ನು ಅನುಮತಿಸಲಾಗುವುದಿಲ್ಲ ಎಂದು ಲಲಿತಾ ಕುಮಾರಿ ವರ್ಸಸ್ ಸ್ಟೇಟ್ ಆಫ್ ಯು.ಪಿ., (2014) 2 ಎಸ್‌ಸಿಸಿ 1 ಪ್ರಕರಣದಲ್ಲಿ ಮಾನ್ಯ ಸುಪ್ರೀಂ ಕೋರ್ಟ್ ನೀಡಿರುವ, ನಿರ್ದೇಶನಗಳನ್ನು ಪುನರುಚ್ಚರಿಸುವ ಸುತ್ತೋಲೆಯನ್ನು ಕರ್ನಾಟಕದ ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಹೊರಡಿಸಬೇಕು ಮತ್ತು ನ್ಯಾಯಾಲಯದ ಮುಂದಿನ ನಿರ್ದೇಶನವಾದ, "ಗುರುತಿಸಬಹುದಾದ ಅಪರಾಧವೊಂದನ್ನು ಬಹಿರಂಗಪಡಿಸಿದರೆ ಪೊಲೀಸ್ ಅಧಿಕಾರಿಯು ಅಪರಾಧವನ್ನು ನೋಂದಾಯಿಸುವ ಕರ್ತವ್ಯದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರು ಸ್ವೀಕರಿಸಿದ ಮಾಹಿತಿಯು ಗುರುತಿಸಬಹುದಾದ ಅಪರಾಧವನ್ನು ಬಹಿರಂಗಪಡಿಸಿದರೆ ಎಫ್‌ಐಆರ್ ದಾಖಲಿಸದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು." ಎಂಬುದರ ಕಟ್ಟುನಿಟ್ಟಿನ ಪಾಲಿನೆಯನ್ನು ಖಾತ್ರಿ ಪಡಿಸಿಕೊಳ್ಳಬೇಕು.

---